ಓ.ಎಸ್. ನಂಬರಃ 20/2020

ಪಿ.ಡಬ್ಲ್ಯೂ.1

**(ಇಂದು ದಿಃ 09-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ.ಎಸ್ ಬಿ ಬಿ ವಕೀಲರಿಂದ,**

ದಾವಾ ಆಸ್ತಿಯ 4 ಗುಂಟೆಯಲ್ಲಿ ತೆಂಗಿನ ಮರಗಳು ಮಾತ್ರ ಇರುವಂತ ಸ್ಥಳವಿರುತ್ತದೆ ಎಂದರೆ ಸರಿ. 4 ಗುಂಟೆ ಜಾಗದ ದಕ್ಷಿಣ ದಿಕ್ಕಿಗೆ ಪ್ರತಿವಾದಿ 6 ಮತ್ತು 7 ರವರ ಮನೆ ಇರುತ್ತದೆ ಎಂದರೆ ಸರಿ. ನೀವು ಹೇಳುವುದು ಪ್ರತಿವಾದಿ 6 ಮತ್ತು 7 ರವರು ಅವರ ಮನೆಯಿಂದ 4 ಗುಂಟೆ ಜಾಗದಲ್ಲಿರುವ ತೆಂಗಿನ ಮರಕ್ಕೆ ಬಟ್ಟೆ ಒಣಗಿಸುವ ಹಗ್ಗವನ್ನು ಕಟ್ಟಿ ಬಟ್ಟೆ ಒಣಗಿಸುತ್ತಾರೆ ಮತ್ತು ಸದ್ರಿ ಸ್ಥಳದಲ್ಲಿ ಒಣ ಕಟ್ಟಿಗೆಗಳನ್ನು ಸಂಗ್ರಹಿಸಿಡುತ್ತಾರೆ ಮತ್ತು ಅವರ ಮನೆಯಿಂದ ಪಾತ್ರೆ ತೊಳೆದ ನೀರು ಮತ್ತು ಬಟ್ಟೆ ತೊಳೆದ ನೀರನ್ನು ದಾವಾ ಆಸ್ತಿಯಲ್ಲಿರುವ ತೆಂಗಿನ ಮರಗಳಿಗೆ ಬಿಡುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಎಂದು ತೋರಿಸಲಾದ 4 ಗುಂಟೆಯಿಂದ ಉತ್ತರ ದಿಕ್ಕಿಗೆ ಈಶ್ವರ ದೇವಾಡಿಗ ಮತ್ತು ಗೋಪಾಲ ದೇವಾಡಿಗ ಎನ್ನುವವರ 2 ಮನೆಗಳಿರುತ್ತವೆ ಎಂದರೆ ಸರಿ. ಸದ್ರಿ ಮನೆಗಳ ಉತ್ತರ ದಿಕ್ಕಿಗೆ ಅಳ್ವೆಕೋಡಿ ರಸ್ತೆಯಿದ್ದು ಸದ್ರಿ ಮನೆಗಳು ರಸ್ತೆಗೆ ಹೊಂದಿಕೊಂಡೇ ಇರುತ್ತವೆ. ಸದ್ರಿ ಮನೆಯ ಪಶ್ಚಿಮ ದಿಕ್ಕಿಗೆ ನಾಗಪ್ಪ ಪೂಜಾರಿಯವರ ಮನೆ ಇರುತ್ತದೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿ 6 ಮತ್ತು 7 ರವರ ಕುಟುಂಬದ ಮಾಲ್ಕಿ ಸ್ವತ್ತು ಇರುತ್ತದೆ ಎಂದರೆ ಸರಿ. ದಾವಾ ಸರ್ವೇ ನಂಬರನ ಒಟ್ಟು 8 ಗುಂಟೆ ಆಸ್ತಿಯಲ್ಲಿ ನಿಮ್ಮ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಗಡಿನಿಡಿ ಮಾಡಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ಸದ್ರಿ 8 ಗುಂಟೆ ಸ್ಥಳದಲ್ಲಿ ಉತ್ತರ ದಿಕ್ಕಿನ 4 ಗುಂಟೆ ಸ್ಥಳದಲ್ಲಿ ನಿಮ್ಮ ಮತ್ತು ನಿಮ್ಮ ಕುಟುಂಬಸ್ಥರ ಕವಲಿನ 2 ಮನೆ ಮತ್ತು 1 ಕೊಟ್ಟಿಗೆ ಇದ್ದು, ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿಗಳ ಸ್ಥಳವಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಸರ್ವೆ ನಂಬರನಲ್ಲಿ ದಕ್ಷಿಣ ದಿಕ್ಕಿಗಿರುವ ತೆಂಗಿನ ಮರಗಳನ್ನು ಮತ್ತು ಅದರಲ್ಲಿ ವಾಸ ಮಾಡಿಕೊಂಡು ಪ್ರತಿವಾದಿ 6 ಮತ್ತು 7 ರವರು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅವರು ಸದ್ರಿ ಸ್ಥಳವನ್ನು ಉಪಯೋಗಿಸಿಕೊಂಡು ಬಟ್ಟೆ ಒಣಗಾಕಿ ನೀರನ್ನು ಬಿಟ್ಟು ಮಾಡುತ್ತಿರುವುದಕ್ಕೋಸ್ಕರ ಅದನ್ನು ತಡೆಯಲು ನೀವು ಅವರ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಓ.ಎಸ್. ನಂಬರಃ 20/2020**

**ಪಿ.ಡಬ್ಲ್ಯೂ.1**

ದಾವಾ ಸರ್ವೆ ನಂಬರನಲ್ಲಿ ಉತ್ತರ ದಿಕ್ಕಿಗೆ ನಿಮಗೆ ಹೇಗೆ 4 ಗುಂಟೆಗೆ ಹಕ್ಕಿದೆಯೋ ಅದೇ ರೀತಿ 4 ಗುಂಟೆ ಆಸ್ತಿಗೆ ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿ 1 ರಿಂದ 6 ರವರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸದ್ರಿ ಸ್ಥಳವನ್ನು ವಹಿವಾಟಿ ಪ್ರಕಾರ ಅಳತೆ ಮಾಡಿ ಗಡಿನಿಡಿ ಗುರುತುಪಡಿಸುವ ಸಂದರ್ಭದಲ್ಲಿ ನೀವೇ ತಕರಾರನ್ನು ಎತ್ತಿ ಅದನ್ನು ಮಾಡದಂತೆ ತಡೆದಿರುತ್ತೀರಿ ಎಂದರೆ ಸರಿಯಲ್ಲ. ದಾವೆಯಲ್ಲಿ ನೀವು ತೋರಿಸಿದಂತಹ ಚತುರ್ಗಡಿಯ ಒಳಗೆ ಇರುವ 4 ಗುಂಟೆಯು ಪ್ರತಿವಾದಿ 1 ರಿಂದ 6 ರವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ವಿರುದ್ಧ ಸುಳ್ಳು ಸಾಧಿಸುವ ಸಲುವಾಗಿ ಒಂದು ಸುಳ್ಳು ದಾವೆಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ.**

**ಹೆ.ದ.ನ್ಯಾ.ದಂ., ಭಟ್ಕಳ.**